**Circular No – 023 / 2023**

Date:10.02.2023

To
All Members of The Association

**REVISED RATES OF MINIMUM WAGES
IN SCHEDULED EMPLOYMENT IN THE GARMENTS,
COSTUMES & TAILORING INDUSTRY GAZETTED**

The Government of Karnataka, Department of Labour has published a Final Notification pertaining to the Minimum Wages in Scheduled Employment in the Garments, Costumes & Tailoring Industry vide Dept Notification No. KE 126 LWA 2023 which has been revised with effect from 17-01-2023 vide our Circular No.10/2023 dated 19.01.2023.

Now the same has been Gazetted on 04.02.2023. However, the minimum wages shall be payable with effect from 17.01.2023.

A copy of the Gazetted Notification is attached.

**For KARNATAKA EMPLOYERS' ASSOCIATION**

**Sd/**
**[B C Prabhakar]**
**President**

+91 9449183208 Bengaluru, Karnataka kea@kea.co.in

**ಕರ್ನಾಟಕ ಸರ್ಕಾರ**

**ಸಂಖ್ಯೆ: ಕಾಇ 1 ಎಲ್ ಡಬ್ಲ್ಯೂಎ 2023**

**ಕರ್ನಾಟಕ ಸರ್ಕಾರದ ಸಚಿವಾಲಯ,**
**ವಿಕಾಸಸೌಧ,**
**ಬೆಂಗಳೂರು, ದಿನಾಂಕ: 17.01.2023**

**ಅಧಿಸೂಚನೆ**

ಕರ್ನಾಟಕ ರಾಜ್ಯದಾದ್ಯಂತ ***"ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ"*** ಅನುಸೂಚಿತ ಉದ್ದಿಮೆಯಲ್ಲಿ ತೊಡಗಿರುವ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ, ಕನಿಷ್ಠ ವೇತನ ಕಾಯ್ದೆ 1948 (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 5(1) (ಬಿ) ರಡಿಯಲ್ಲಿ ರಾಜ್ಯ ಸರ್ಕಾರವು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ: 22.2.2018 ರಂದು ಕರಡು ಅಧಿಸೂಚನೆ ಸಂ. ಕಾಇ 76 ಎಲ್ಎಂಡಬ್ಲ್ಯೂ 2017 ಯನ್ನು ಹೊರಡಿಸಿದ್ದು, ಸದರಿ ಕರಡು ಅಧಿಸೂಚನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಕಾಇ 21 ಎಲ್ಎಂಡಬ್ಲ್ಯೂ 2017 (1), ಬೆಂಗಳೂರು, ದಿನಾಂಕ: 22.3.2018 ರನ್ವಯ ಹಿಂಪಡೆದು, ಕನಿಷ್ಠ ವೇತನ ಕಾಯ್ದೆ 1948ರ ಕಲಂ 5 (1) (ಎ) ರಡಿ ದಿನಾಂಕ: 13.8.2018 ರಂದು ಆದೇಶ ಸಂಖ್ಯೆ: ಕಾಇ 21 ಎಲ್ಎಂಡಬ್ಲ್ಯೂ 2017, ರಲ್ಲಿ ತ್ರಿಪಕ್ಷೀಯ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿರುತ್ತದೆ. ಸದರಿ ತ್ರಿಪಕ್ಷೀಯ ಸಮಿತಿಯು ಅನೇಕ ಸಭೆಗಳನ್ನು ನಡೆಸಿ ಬಹುಮತ ಆಧಾರದ ಮೇಲೆ ಕನಿಷ್ಠ ವೇತನ ದರಗಳನ್ನು ಶಿಫಾರಸ್ಸು ಮಾಡಿದ್ದು, ಸರ್ಕಾರವು ಅಧಿಸೂಚನೆ ಸಂಖ್ಯೆ: ಕಾಇ 21 ಎಲ್ಎಂಡಬ್ಲ್ಯೂ 2017 (ಆ), ದಿನಾಂಕ: 31-10-2019 ಅನ್ನು ಹೊರಡಿಸಿರುತ್ತದೆ.

ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಪೀಲ್ ಸಂಖ್ಯೆ: 1611/2019 ಮತ್ತು ಇತರೆ ಪ್ರಕರಣಗಳಲ್ಲಿ ಹೊರಡಿಸಿರುವ ತೀರ್ಪಿನಲ್ಲಿ ಈ ಕೆಳಕಂಡಂತೆ ನಿರ್ದೇಶಿಸಿರುತ್ತದೆ.

***(i) The impugned notification dated 22nd March 2018 is hereby set aside and three final notifications dated 30th December 2017 as well as the preliminary notification dated 22nd February 2018 which were subject matter of the said order dated 22nd March 2018 stand revived. Hence, the notifications dated 31st October 2019 in relation to the employments covered by the four notifications subject matter of the order dated 22nd March 2018, are rendered inoperative;***

***(ii) The State Government shall take further steps on the basis of the draft notification dated 22nd February 2018 in accordance with Section 5 of the said Act of 1948 as expeditiously as possible;***

ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನನ್ವಯ ದಿನಾಂಕ: 03.07.2020 ರಂದು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಮುಂದೆ ಮಂಡಿಸಲಾಗಿತ್ತು. ಸದರಿ ಸಭೆಯ ಹಾಗೂ ದಿನಾಂಕ: 06.09.2022 ರಂದು ನಡೆದ ಭಾಗೀದಾರರ ಸಭೆಯಲ್ಲಿ ವ್ಯಕ್ತವಾದ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ದಿನಾಂಕ: 23.11.2022ರಂದು ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳನ್ವಯ, ಗಾರ್ಮೆಂಟ್ಸ್ ಉದ್ದಿಮೆಗಳ ಪ್ರಸ್ತುತ ಸ್ಥಿತಿ ಹಾಗೂ ಕಾರ್ಮಿಕರ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು, ರಾಜ್ಯ ಸರ್ಕಾರವು 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 3(1) (ಬಿ) ಮತ್ತು 5(1) (ಬಿ) ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ "ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಕೆಳಕಂಡ ಕೋಷ್ಟಕದಲ್ಲಿರುವಂತೆ ಪರಿಷ್ಕರಿಸಲಾಗಿದೆ.

**"ಕನಿಷ್ಟ ವೇತನ ದರಗಳ ಕೋಷ್ಟಕ"**

***"ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ"***

| ಕೆಲಸದ ವರ್ಗೀಕರಣ | ವಲಯ-1 | | ವಲಯ-2 | | ವಲಯ-3 | |
|---|---|---|---|---|---|---|
| | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| **ಅತಿ ಕುಶಲ ಕಾರ್ಮಿಕರು**<br>1. ನಕಾಶೆ ಮಾಡುವವ<br>2. ಗುರುತು ಮಾಡುವವ ಹಾಗೂ ಕತ್ತರಿಸುವವ<br>3. ದರ್ಜಿ<br>4. ನಕಾಶೆ ಹಾಗೂ ಕತ್ತರಿಸುವವ ಇತರೆ ಅತಿಕುಶಲ ಕೆಲಸಕ್ಕೆ | **434.48** | **11296.38** | **428.60** | **11143.50** | **422.72** | **10990.62** |
| **ಕುಶಲ ಕಾರ್ಮಿಕರು**<br>1. ದರ್ಜಿ (1ನೇ ದರ್ಜೆ)<br>2. ಮುಖ್ಯ ಅಡಿಗೆಯವ<br>3. ಡ್ರೈವರ್ (ಚಾಲಕ)<br>4. ಕತ್ತರಿಸುವ ಯಂತ್ರ ಚಾಲಕ<br>5. ಪರೀಕ್ಷಕರು<br>6. ದರ್ಜಿ ಮೇಸ್ತ್ರಿ<br>7. ಗುರುತು ಮಾಡಿ ಕತ್ತರಿಸುವವ<br>8. ಇತರೆ ಕುಶಲ ಕೆಲಸಕ್ಕೆ | **421.65** | **10962.85** | **415.82** | **10811.34** | **409.99** | **10659.82** |
| **ಅರೆ ಕುಶಲ ಕಾರ್ಮಿಕರು**<br>1. ದರ್ಜಿ [2ನೇ ದರ್ಜೆ]<br>2. ಖಾಜಾ ಮಿಷನ್ ಚಾಲಕ<br>3. ತಡೆ ಚಕ್ರದ ಮಿಷನ್ ಚಾಲಕ [ಓವರ್ ಲಾಕರ್]<br>4. ಇಸ್ತ್ರಿ ಮಾಡುವವ<br>5. ಅಳತೆ ಪರೀಕ್ಷಿಸುವವ<br>6. ಗುಂಡಿ ಖಾಜಾ ಹೊಲಿಯುವವ<br>7. ಇತರೆ ಅರೆಕುಶಲ ಕೆಲಸಕ್ಕೆ | **411.37** | **10695.72** | **405.65** | **10546.94** | **399.92** | **10397.94** |
| **ಅಕುಶಲ ಕಾರ್ಮಿಕರು**<br>1. ಪ್ಯಾಕ್ ಮಾಡುವವ<br>2. ವಿತರಣೆ ಮಾಡುವವ<br>3. ಬಟ್ಟೆ ಹರಡುವವ<br>4. ಟ್ರಿಮ್ ಮಾಡುವವ<br>5. ಸಹಾಯಕ<br>6. ರವಾನಿಸುವವ<br>7. ಮಾಲಿ<br>8. ಭೋಜನಾಲಯದ ಕೆಲಸಗಾರರು<br>9. ಕೂಲಿ<br>10. ದರ್ಜಿ-3ನೇ ದರ್ಜೆ<br>11. ವಾಚ್ & ವಾರ್ಡ್<br>ಇತರೆ ಅಕುಶಲ ಕೆಲಸಕ್ಕೆ | **401.07** | **10427.91** | **395.35** | **10279.12** | **389.63** | **10130.34** |

| ಕಛೇರಿ ಸಿಬ್ಬಂದಿಗಳು ಮತ್ತು ಚಾಲಕರು | | | | | | |
|---|---|---|---|---|---|---|
| ಹುದ್ದೆಗಳ ವಿವರ | ವಲಯ -1 | | ವಲಯ -2 | | ವಲಯ -3 | |
| | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| ಸೀನಿಯರ್ ಅಕೌಂಟೆಂಟ್ ಮತ್ತು ತತ್ಸಮಾನ ಹುದ್ದೆ. | **459.77** | **11954.01** | **445.66** | **11587.10** | **432.72** | **11250.76** |
| ಕ್ಯಾಷಿಯರ್, ಸ್ಟೆನೋಗ್ರಾಫರ್, ಸ್ಟೋರ್ ಕೀಪರ್ ಮತ್ತು ತತ್ಸಮಾನ ಹುದ್ದೆ. | **450.21** | **11705.51** | **437.39** | **11372.17** | **424.57** | **11038.84** |
| ಕಿರಿಯ ಗುಮಾಸ್ತ , ಟೈಪಿಸ್ಟ್, ಡಾಟಾ ಎಂಟ್ರೀ ಆಪರೇಟರ್ ಮತ್ತು ತತ್ಸಮಾನ ಹುದ್ದೆ. | **437.13** | **11365.49** | **424.54** | **11038.17** | **411.96** | **10710.84** |
| ವಾಚ್ ಮನ್, ಆಫೀಸ್ ಬಾಯ್, ಅಟೆಂಡರ್, ಹೆಲ್ಪರ್/ ಸಹಾಯಕ ಮತ್ತು ತತ್ಸಮಾನ ಹುದ್ದೆ. | **391.35** | **10175.21** | **381.05** | **9907.40** | **371.90** | **9669.35** |
| ಲಾರಿ ಡ್ರೈವರ್, ಕಾರ್ ಡ್ರೈವರ್, ಜೀಪ್ ಡ್ರೈವರ್ | **438.56** | **11402.48** | **425.74** | **11069.14** | **414.08** | **10766.11** |
| ಲಾರಿ, ಕಾರ್, ಜೀಪ್ ಕ್ಲೀನರ್ | **391.35** | **10175.20** | **381.05** | **9907.40** | **371.70** | **9664.10** |

**ಮೇಲ್ಕಂಡ ಕನಿಷ್ಠ ವೇತನ ದರಗಳನ್ನು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಉದ್ಯೋಗದಾತರು ಪಾಲಿಸಲು ಬಾದ್ಯಸ್ಥರಿರುತ್ತಾರೆ;**

**1. ವ್ಯತ್ಯಾಸವಾಗುವ ತುಟ್ಟಿಭತ್ಯೆ:-**

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದAದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಾಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 7973 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ತುಟ್ಟಿ ಭತ್ಯೆಯನ್ನು ಪಾವತಿಸತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:-**

ಅ) ಮಾಸಿಕ ವೇತನವನ್ನು ಪಡೆಯುವವರು:-

ತಿಂಗಳ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x 30 ದಿನಗಳು

ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, ನಾಲ್ಕು (4) ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಈ ಕೆಳಕಂಡಂತೆ ಲೆಕ್ಕ ಹಾಕತಕ್ಕದ್ದು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

**ಆ) ದಿನಗೂಲಿ ವೇತನ ಪಡೆಯುವವರು :-**

**ದಿನದ ತುಟ್ಟಿಭತ್ಯೆ = <u>ಪ್ರತಿ ವರ್ಷ ಹೆಚ್ಚಾಗುವ ಅಂಶಗಳು x ತುಟ್ಟಿಭತ್ಯೆಯ ದರ x 30 ದಿನಗಳು</u>**

2. ಮಹಿಳೆಯರು, ಪುರುಷರು ಮತ್ತು ತೃತೀಯ ಲಿಂಗಿಗಳು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಎಲ್ಲರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.
3. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.
4. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
5. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.
6. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಟ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡು ಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.
7. ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡು ಪಟ್ಟು ವೇತನವನ್ನು ಪಾವತಿಸತಕ್ಕದ್ದು.
8. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.
9. ಟ್ರೈನಿಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.
10. ನೌಕರರುಗಳ ವೇತನವನ್ನು ಚೆಕ್ ಮೂಲಕ ಪಾವತಿಸುವುದು ಅಥವಾ ನೌಕರರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡತಕ್ಕದ್ದು.
11. ಈ ಅಧಿಸೂಚನೆಯ ವಲಯಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ;

| | |
|---|---|
| ವಲಯ-1 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿ ಮತ್ತು ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ಮತ್ತು ಗೊತ್ತುಪಡಿಸಿದ ಆಗ್ಲೋಮರೇಷನ್ ಪ್ರದೇಶಗಳು |
| ವಲಯ-2 | ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು |
| ವಲಯ-3 | ವಲಯ-1 ಮತ್ತು 2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಇತರೆ ಭಾಗಗಳು. |

12. ಈ ಅಧಿಸೂಚನೆಯಲ್ಲಿ ನಮೂದಿಸಿದ ಉದ್ಯೋಗಿಗಳನ್ನು ನಾಲ್ಕು ಪ್ರವರ್ಗಗಳನ್ನಾಗಿ ವಿಂಗಡಿಸಿದ್ದು, ಪ್ರತಿ ಪ್ರವರ್ಗದ ವ್ಯಾಖ್ಯಾನವು ಕೆಳಗಿನಂತಿರುತ್ತದೆ;

**i) ಅಕುಶಲ ಕಾರ್ಮಿಕರು (Un-skilled Workers)**

ಅಕುಶಲ ಕಾರ್ಮಿಕರೆಂದರೆ ದೈಹಿಕ ಶ್ರಮದ ಆಧಾರದ ಮೇಲೆ ಕೆಲಸ ನಿರ್ವಹಿಸುವ ಕಾರ್ಮಿಕರಾಗಿದ್ದು, ವೈಯಕ್ತಿಕ ನಿರ್ಣಯ ಹಾಗೂ ಪೂರ್ವ ಅನುಭವದ ಅವಶ್ಯಕತೆಯಿಲ್ಲದ ಸರಳ ಕರ್ತವ್ಯವನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ. ಉದ್ಯೋಗ / ವೃತ್ತಿಯ ಪರಿಸರದ ಪರಿಚಯ ಮತ್ತು ದೈಹಿಕ ಶ್ರಮ ಇಲ್ಲಿ ಮುಖ್ಯ ಅಂಶವಾಗಿರುತ್ತದೆ.

**ii) ಅರೆ ಕುಶಲ ಕಾರ್ಮಿಕರು (Semi Skilled Workers)**

ಅರೆ ಕುಶಲ ಕಾರ್ಮಿಕರೆಂದರೆ ವೈಯಕ್ತಿಕ ನಿರ್ಣಯಕ್ಕೆ ಹೆಚ್ಚು ಅವಕಾಶವಿಲ್ಲದ ನಿರ್ದಿಷ್ಟ ನಿಯತ ಕ್ರಮದ ಪುನರಾವರ್ತನೆಯ ಕೆಲಸಗಳನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾನೆ. ಕಾರ್ಮಿಕರ ಕೆಲಸವು ನಿರ್ದಿಷ್ಠ ಮಿತಿಯನ್ನು ಹೊಂದಿದ್ದು, ಇನ್ನೊಬ್ಬ ವ್ಯಕ್ತಿಯ ತೀರ್ಮಾನಕ್ಕೆ ಅನುಗುಣವಾಗಿ ನಿರ್ವಹಿಸುವ ಕೆಲಸವಾಗಿರುತ್ತದೆ. ಹಾಗೂ ಯಂತ್ರಗಳ ಸಹಾಯದಿಂದ ನಿರ್ವಹಿಸುವ ಸರಳ ಕೆಲಸಗಳನ್ನು ಮಾಡುವವರಾಗಿರುತ್ತಾರೆ.

**iii) ಕುಶಲ ಕಾರ್ಮಿಕರು (Skilled Workers)**

ಕುಶಲ ಕಾರ್ಮಿಕರು ತಮ್ಮ ಸ್ವಂತ ನಿರ್ಣಯ, ತೀರ್ಮಾನ ಮತ್ತು ವಿವೇಚನೆ ಒಳಪಟ್ಟು ಜವಾಬ್ದಾರಿಯುತ ಕರ್ತವ್ಯಗಳನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ. ತಮ್ಮ ವೃತ್ತಿ ಮತ್ತು ಉದ್ಯೋಗದ ಬಗ್ಗೆ ಆಳವಾದ ಮತ್ತು

ಅಮೂಲಾಗ್ರ ಜ್ಞಾನವನ್ನು ಹೊಂದಿದ ಕಾರ್ಮಿಕರಾಗಿರುತ್ತಾರೆ. ಸದರಿ ಉದ್ಯೋಗ ಮತ್ತು ವೃತ್ತಿಯ ಬಗ್ಗೆ ವಿದ್ಯಾರ್ಹತೆ ಪರಿಣಿತಿ ಮತ್ತು ಅನುಭವ ಹೊಂದಿರುತ್ತಾರೆ.

**iv ) ಅತಿ ಕುಶಲ ಕಾರ್ಮಿಕರು (Highly Skilled Workers)**

ಅತಿ ಕುಶಲ ಕಾರ್ಮಿಕರೆಂದರೆ ಕರ್ತವ್ಯವನ್ನು ನಿರ್ವಹಿಸಲು ದಕ್ಷತೆ ಮತ್ತು ಅತೀವ ಸಾಮರ್ಥ್ಯ ಇರುವ ಕಾರ್ಮಿಕರಾಗಿದ್ದು, ಕುಶಲ ಕಾರ್ಮಿಕರ ಸಹಿತ ಎಲ್ಲಾ ಕಾರ್ಮಿಕರ ಕರ್ತವ್ಯಗಳ ಮೇಲ್ವಿಚಾರಣೆ ನಡೆಸಿ ಪರಿಣಾಮಕಾರಿಯಾಗಿ ಫಲಿತಾಂಶವನ್ನು ಸಾಧಿಸಲು ಶಕ್ತರಾಗಿರುವ ಕಾರ್ಮಿಕರಾಗಿರುತ್ತಾರೆ ಹಾಗೂ ಸದರಿ ಉದ್ಯೋಗ ಮತ್ತು ವೃತ್ತಿಯ ಬಗ್ಗೆ ವಿಶೇಷ ಜ್ಞಾನ ಮತ್ತು ಪರಿಣಿತಿಯನ್ನು ಹೊಂದಿರುತ್ತಾರೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಎ. ಉಮಾದೇವಿ)**
**ಪೀಠಾಧಿಕಾರಿ-2,**
**ಕಾರ್ಮಿಕ ಇಲಾಖೆ (ಕನಿಷ್ಠ ವೇತನ)**